ಶ್ರೀ ಎ. ಬಿ. ಜಕನೂರ್.— ಮಾನ್ಯ ಸದಸ್ಯರಿಗೆ ವಿಚಾರ ಗೊತ್ತಿರಬಹುದು. ಈಗ ಇದ್ದಂಥ ಪ್ಯಾಟರನ್ ಕಂಟಿನ್ಯೂ ಮಾಡಿ ೧೫೦ ರೂಪಾಯಿ ಕೊಡುತ್ತಿದ್ದುದನ್ನು ೨೦೦ ರೂಪಾಯಿ ಕೊಡಬೇಕೆಂದು ಮಾಡಿರುವುದು ತಮಗೆ ಗೊತ್ತಿದೆ. ಇದರ ಜೊತೆಗೆ ಸೀಡ್‌ಮನಿ ಕೊಟ್ಟು ಉದ್ಯೋಗಾವಕಾಶ ಒದಗಿಸಲಿಕ್ಕೆ ವ್ಯವಸ್ಥೆ ಮಾಡಿದೆ.

ಅಧ್ಯಕ್ಷರು.— ಅವರ ಬಗ್ಗೆ ಪಟ್ಟಿ ಮಾಡತಕ್ಕ ಪಾಲಿಸಿ ಇದೆಯಲ್ಲ, ಅದನ್ನು ಮುಂದುವರಿಸಿ ಕೊಂಡು ಹೋಗುತ್ತಿದ್ದೀರಾ, ಅದರಲ್ಲಿ ಏನಾದರೂ ಬದಲಾವಣೆ ಆಗಿದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಎ.ಬಿ. ಜಕನೂರ್. ಎಕ್ಸಿಸ್ಟಿಂಗ್ ಪ್ಯಾಟರನ್ ಇದೆ.

ಶ್ರೀ ಎ. ಜಿ. ಕೊಡಗಿ.— ಅಧ್ಯಕ್ಷರೆ, ಪ್ರಶ್ನೆಯಲ್ಲಿ ಸರ್ಕಾರದ ನೀತಿಯಲ್ಲಿ ಏನಾದರೂ ಹೊಸ ಬದ ಲಾವಣೆಯಾಗಿದೆಯೇ ಎಂದು ಕೇಳಿದ್ದಾರೆ. ಆ ಬಗ್ಗೆ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ. ನೀತಿ ಏನು ಎಂದು ಕೇಳಿದಾಗ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹೊಸ ನೀತಿ, ಧೋರಣೆ ಗೊತ್ತಿಲ್ಲ ಎಂದರೆ ಏನು ಅರ್ಥ. ಸ್ಟೆ ಬೃಫಂಡರಿ ಗ್ರಾಜ್ಯುಯೇಟ್ಸ್ ರೆಕ್ರೂಟ್‌ಮೆಂಟ್‌ನಲ್ಲಿ ಏನು ವ್ಯವಸ್ಥೆ ಮಾಡಿದ್ದೀರಾ ಎಂದರೆ, ಹೊಸದಾಗಿ ಏನಾಗಿದೆ ಗೊತ್ತಿಲ್ಲ ಎಂದು ಇರುವ ನೀತಿಯನ್ನು ಹೇಳುತ್ತಿದ್ದಾರೆ. ಹೊಸದಾಗಿ ಏನಾಗಿದೆ ಎನ್ನುವುದನ್ನು ಪ್ರಕಟ ಮಾಡಿ.

ಶ್ರೀ ಎ.ಬಿ. ಜಕನೂರ್.— ಇಲ್ಲಿ ಅಚ್ಚಾಗಿದೆ. ಎಕ್ಸಿಸ್ಟಿಂಗ್ ಪ್ಯಾಟರನ್ ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ಹೇಳಿದ್ದೇವೆ.

SRI M. C. BASAPPA.— I will clarify the question. the previous Government took a decision to give stipend to the graduates to prepare a list of eligible candidates for stipend. They constituted a small committee at taluka level.

SRI A.B. JAKANUR.— It still exists.

SRI M. C. BASAPPA. – I am sorry. Taluk level committees were abolished. Sir, perhaps the Hon. Minister is ignorant of the fact that all committees have been abolished by this Government only. I am sorry, the Hon. Minister does not know that information.

MR. SPEAKER.— Does the Hon. Minister requires sometime to answer this question? If that is the case, I will hold over this question.

SRI A.B. JAKANUR.— Sir, regarding this committee...

MR. SPEAKER.— This is a burning issue and a volatile issue and wherever hon. Members go, they have to face the unemployed graduates, who are receiving stipend. This is a burning issue. That is why, if the Hon. Minister require sometime, I shall hold over this question.

Now, we shall hold over this question and the Hon. Minister can answer it sometime tomorrow.

Now, Sri Micheal Fernandes will put his question.

Jobs for the Dependents of Deceased and Retired Employees Within their own Establishments.

316. SRI MICHAEL B. FERNANDES (Bharathinagar).— Will the Minister for Labour be pleased to state. –

(*a*) whether the Government is aware that there has always been a persistant demand by the public and private sector employees

and their trade unions for job for the dependents of deceased and retiring employees within their own establishments.—

(*b*) whether Government is contemplating to bring any legislation in response to this demand enjoining, upon the employers both in the public and private sectors to give such employment to the dependents of deceased and retiring employees?

SRI A. B. JAKANUR (Minister for Labour).—

(*a*) Yes.

(*b*) No.

ಶ್ರೀ ಮೈಕೇಲ್ ಫರ್ನಾಂಡಿಸ್.— ಸ್ವಾಮಿ, ಈ ಪ್ರಶ್ನೆಯನ್ನು ಕೇಳಲು ನನಗೇ ಸಂಶಯವಾಗುತ್ತಿದೆ. ನಾನು ಇಂಗ್ಲೀಷ್‌ನಲ್ಲಿ ಪ್ರಶ್ನೆಯನ್ನು ಕಳುಹಿಸಿದ್ದೆ ಆದರೆ ಅದನ್ನು ಕನ್ನಡದಲ್ಲಿ ಭಾಷಾಂತರಿಸುವಾಗ

"ಸರ್ಕಾರ ಹಾಗೂ ಖಾಸಗೀ ವಲಯದ ಉದ್ಯಮ ಸಂಸ್ಥೆಗಳ ನೌಕರರು ಹಾಗೂ ಅವಗ ವೃತ್ತಿ ಸಂಘಗಳವರು ಪದೇ ಪದೇ ಮೃತರಾದ ಹಾಗೂ ನಿವೃತ್ತರಾಗುವ ನೌಕರರ"

ಎಂದು ಇದೆ. ಕಾರ್ಖಾನೆ ನೌಕರರು ಪದೇ ಪದೇ ನಿವೃತ್ತರಾಗುವ ಅಥವಾ ಪದೇ ಪದೇ ಮೃತರಾಗುವ ಪ್ರಶ್ನೆಯೇ ಇಲ್ಲ. ಒಂದುಸಾರಿ ಅವರು ಮೃತರಾದರೆ ಅಲ್ಲಿಗೆ ಮುಗಿಯಿತು, ಮತ್ತೆ ಸತ್ತವರ ಪ್ರೇತ ವೇನಾದರೂ ಬಂದು ಕೇಳಬಹುದು ಅಷ್ಟೆ.

ಅಧ್ಯಕ್ಷರು.— ಇಂಗ್ಲಿಷ್‌ನಲ್ಲಿ ಇರುವುದನ್ನು ಓದಿ ನೋಡಿ.

SRI MICHEAL B. FERNANDES.— Sir, even if we read the English version of my question, it does not mean that a worker will die over and over again. I know that sometimes they apply for leave saying 'my grand-mother has died'. I also know that the same application will come ten times a year. Here, that is not the case and I am also not making such a suggestion. Here, "persistent demand" ಎಂದು ಇದೆ. ಮಂತ್ರಿಗಳು ನನ್ನ ಪ್ರಶ್ನೆಗೆ ಸ್ಪಷ್ಟೀಕರಣ ನೀಡಬೇಕು. ನಾನು ಒಂದೇ ಒಂದು ಪ್ರಶ್ನೆಯನ್ನು ಹಾಕುವುದಕ್ಕೆ ಇಷ್ಟ ಪಡುತ್ತೇನೆ. ಇದು ಮಂತ್ರಿಗಳ ಗಮನಕ್ಕೆ ಬಂದಿದೆಯೇ? ತಾವು ಇತ್ತೀಚೆಗೆ ಈ ಖಾತೆಯನ್ನು ತೆಗೆದುಕೊಂಡಿದ್ದೀರಿ. ನಿಮಗಿಂತ ಮೊದಲು ಮಾನ್ಯ ಇಬ್ರಾಹಿಂರವರು ಈ ಖಾತೆಯ ಸಚಿವರಾಗಿದ್ದರು. ಒಂದುಸಾರಿ ಕೆವಿಸ್‌ಆರ್‌ಟಿಸಿ ಟ್ರೇಡ್ ಯೂನಿಯನ್ ಮೀಟಿಂಗ್‌ನಲ್ಲಿ ಇಬ್ರಾಹಿಂರವರು ಮಾತನಾಡುತ್ತಾ ಇಲ್ಲಿ ನಿವೃತ್ತರಾಗುವ ಕಾರ್ಮಿಕರ ಮಕ್ಕಳಿಗೆ, ಅಥವಾ ಸರ್ವೀಸ್‌ನಲ್ಲಿ ಇದ್ದಾಗಲೇ ತೀರಿಕೊಂಡವರ ಮಕ್ಕಳಿಗೆ ಅಥವಾ ಆಶ್ರಿತರಿಗೆ ಕೆಲಸ ಕೊಡುವ ವಿಚಾರದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದರು. ಇದರ ಬಗ್ಗೆ ನೀವು ಏನು ತೀರ್ಮಾನವನ್ನು ತಗೆದುಕೊಂಡಿದ್ದೀರಿ ಏಕೆಂದರೆ, ಇದರ ಬಗ್ಗೆ ಒಂದು ಕಾನೂನು ತರುವ ಯೋಚನೆ ಸರ್ಕಾರಕ್ಕಿಲ್ಲವೆಂದು ತಾವು ಹೇಳಿರುವುದನ್ನು ನೋಡಿದರೆ ನಮ್ಮ ಮಂತ್ರಿಮಂಡಲದಲ್ಲಿ ಏನಾದರೂ ಭಿನ್ನಾಭಿಪ್ರಾಯ ಇದೆಯೇ? ಮಾನ್ಯ ಇಬ್ರಾಹಿಂರವರು ಆಗ ಇಂಥ ಕೇಸ್‌ನಲ್ಲಿ ಆಶ್ರಿತರಿಗೆ, ಅಥವಾ ಅವರ ಮಕ್ಕಳಿಗೆ ನೌಕರಿ ಕೊಡುತ್ತೇವೆಂದು ಹೇಳಿದ್ದರು. ಈಗ ನೀವು ಇಲ್ಲವೆಂದು ಹೇಳುತ್ತಿದ್ದೀರಿ.

† ಶ್ರೀ ಎ. ಬಿ. ಜಕನೂರ್.— ಹಿಂದಿನ ಮಂತ್ರಿಗಳು ಹೇಳಿದ್ದನ್ನು ತಾವು ಪೇಪರ್‌ನಲ್ಲಿ ನೋಡಿ ಹೇಳಿರಬಹುದು. ಸರ್ಕಾರದ ಪರಿಶೀಲನೆಗೆ ಈ ವಿಚಾರ ಬಂದಿಲ್ಲ ಎಂಬುದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಮೈಕೇಲ್ ಫರ್ನಾಂಡೀಸ್.— ಸ್ವಾಮಿ, ನೀವು ಇದರ ಬಗ್ಗೆ ಒಂದು ಕಾನೂನು ಜಾರಿಗೆ ತರದಿರುವುದಕ್ಕೆ ಕಾರಣ ಏನು? ಸರ್ವೀಸ್‌ನಲ್ಲಿದ್ದವರು ನಿವೃತ್ತರಾದರೆ ಅಥವಾ ತೀರಿಕೊಂಡವರ ಆಶ್ರಿತರಿಗೆ ಅವರ ಸಂಸಾರವನ್ನು ಸಾಗಿಸಲು ಕಾರ್ಖಾನೆಯವರು ಅಥವಾ ಮಾಲೀಕರು ಕೆಲಸ ಏತಕ್ಕೆ ಕೊಡಬಾರದು? ಇದರಲ್ಲಿ ನಿಮ್ಮ ಆಕ್ಷೇಪಣೆ ಏನಿದೆ?

ಶ್ರೀ ಎ. ಬಿ. ಜಕನೂರ್.— ನಿವೃತ್ತರಾದವರ ಅಥವಾ ತೀರಿಕೊಂಡವರ ಆಶ್ರಿತರಿಗೆ ನೌಕರಿ ಕೊಡುವ ವಿಚಾರವನ್ನು ಮಾನವೀಯತೆಯ ದೃಷ್ಟಿಯಿಂದ ಕಾರ್ಖಾನೆಯ ಮಾಲೀಕರೂ ಮಂತ್ರಿ ಕನ್ಸಿಲಿ

ಯೇಷನ್ ಆಫೀಸರ್‌ಗಳು ಕೂತು ಮಾಡುತ್ತಾರೆ. ನಿರ್ದಿಷ್ಟವಾಗಿ ಹೇಳುವುದಾದರೆ ಇಂತಹ ಕಾರ್ಮಿಕರ ಮಕ್ಕಳಿಗೆ ಕೆಲಸವನ್ನು ಕೊಡಬೇಕು.

ಅಧ್ಯಕ್ಷರು.— ಸರ್ಕಾರೀ ಸೇವೆಯಲ್ಲಿದ್ದು ಮೃತರಾದವರ ಮಕ್ಕಳಿಗೆ ಕೆಲಸ ಕೊಡಬೇಕೆಂದಿದೆ.

ಶ್ರೀ ಎ. ಬಿ. ಜಕನೂರ್.— ಇಲ್ಲಿ ಕೆಲವು ಕಂಡೀಷನ್ಸ್ ಇವೆ. ಅಧಿಕಾರಿಗಳ ಮಕ್ಕಳಿಗೆ ಅಧಿಕಾರಿ ಸ್ಥಾನ ಕೊಡುವುದು. ಕಾರ್ಮಿಕರ ಮಕ್ಕಳಿಗೆ ನೌಕರಿ ಕೊಡುವುದು ಈ ರೀತಿ ಅನುವಂಶಿಕವಾಗಿ ಹುದ್ದೆಗಳನ್ನು ಕೊಡತಕ್ಕ ಪದ್ಧತಿ ಸರಿಯಲ್ಲ. ಯಾವ ಕಾರ್ಮಿಕರು ಸಾಯುತ್ತಾರೆ, ಅಥವಾ ನಿವೃತ್ತರಾಗುತ್ತಾರೆ ಅವರ ಆಶ್ರಿತರಿಗೆ ತಿನ್ನುವುದಕ್ಕೆ ಹಾಗೂ ಜೀವನೋಪಾಯಕ್ಕೆ ಏನೂ ಇರದಿದ್ದರೆ ಅಂಥವರಿಗೆ ನೌಕರಿ ಕೊಡುವುದು ಸೂಕ್ತವಾದುದು.

ಶ್ರೀ ಪಂಪಾಪತಿ.— ಕಾರ್ಮಿಕರ ಮಕ್ಕಳಿಗೆ ನೌಕರಿ, ಮಂತ್ರಿಗಳ ಮಕ್ಕಳಿಗೆ ಮಂತ್ರಿ ಪದವಿ ಕೊಡುವುದು ಬೇಡ. ಯಾರಿಗೆ ತಿನ್ನುವುದಕ್ಕೆ, ಅಥವಾ ಜೀವನೋಪಾಯಕ್ಕೆ ಏನೂ ಇರುವುದಿಲ್ಲ ಅಂಥವರ ಮಕ್ಕಳಿಗೆ ನೌಕರಿ ಕೊಡುವಂತೆ ಒಂದು ಕಾಯಿದೆ ತರುತ್ತೀರಾ?

ಶ್ರೀ ಎ. ಬಿ. ಜಕನೂರ್.— ತಿನ್ನುವುದಕ್ಕೆ, ಜೀವನೋಪಾಯಕ್ಕೆ ಏನೂ ಇಲ್ಲದಿರುವವರಿಗೆ ನೌಕರಿ ಕೊಡಬೇಕೆಂದು ಮಾನವೀಯತೆ ದೃಷ್ಟಿಯಿಂದ ಕಾಯಿದೆ ತರಬಹುದು.

ಶ್ರೀ ಮೈಕೇಲ್ ಫರ್ನಾಂಡೀಸ್.— ಈ ರೀತಿ ಸೇವೆಯಲ್ಲಿದ್ದು ನಿವೃತ್ತರಾದವರ, ಅಥವಾ ತೀರಿ ಕೊಂಡವರ ಆಶ್ರಿತರಿಗೆ ನೌಕರಿ ಕೊಡಿ ಎಂದರೆ ಕೆಲವು ಕಾರ್ಖಾನೆಗಳ ಆಡಳಿತ ವರ್ಗದವರು ಏನು ಹೇಳುತ್ತಾರೆಂದರೆ, ನಿಮ್ಮ ಹುಡುಗನ ಹೆಸರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಬಂದರೆ ನಾವು ತೆಗೆದು ಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ ನಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನವರಿಗೆ ಇಂಥ ಹುಡುಗನ ಹೆಸರನ್ನು ಇಂಥ ಕಾರ್ಖಾನೆಗೆ ಕಳುಹಿಸಿಕೊಡಿ ಎಂದು ಶಿಫಾರಸು ಮಾಡಿದರೆ, ಕಾರ್ಖಾನೆಯವರು ಇದನ್ನು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಸೀನಿಯಾರಿಟಿ ಪ್ರಕಾರ ನಾವು ಹೆಸರುಗಳನ್ನು ಕಳುಹಿಸುತ್ತಿದ್ದೇವೆ ಎಂದು ಹೇಳುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಸತ್ತವರ ಮನೆಯಲ್ಲಿ ಕೆಲಸಕ್ಕೆ ಸೇರಲು ವಯಸ್ಸಿಲ್ಲದ ಚಿಕ್ಕ ಮಕ್ಕಳು ಇರುತ್ತವೆ, ಇಲ್ಲವೇ ಅವರ ಮನೆಯಲ್ಲಿ ಇನ್ನೊಬ್ಬರು ಕೆಲಸದಲ್ಲಿದ್ದರೆ ಇವರಿಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ನನಗೆ ಗೊತ್ತಿರುವ ಹಾಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ೧೯೭೨–೭೩ನೇ ಸಾಲಿನಿಂದಲೂ ಇಂಥ ಕೇಸ್‌ಗಳು ಪೆಂಡಿಂಗ್ ಬಿದ್ದಿವೆ, ಇಂಥ ಕೇಸ್‌ನಲ್ಲಿ ಮಾಲೀಕರು ಕೆಲಸ ಕೊಡುವುದು ಒಳ್ಳೆಯದು.

ಶ್ರೀ ಎ.ಬಿ. ಜಕನೂರ್:— ಸ್ವಾಮಿ, ಸೀನಿಯಾರಿಟಿಯನ್ನು ಯಾವುದೇ ಕಾರಣದಿಂದಲೂ ತಪ್ಪಿಸುವುದಕ್ಕಾಗುವುದಿಲ್ಲ ಅಥವಾ ಓವರ್‌ಲುಕ್ ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡಿದ್ದೇ ಆದರೆ ಮುಂದೆ ಇದರಿಂದ ಬಹಳ ತೊಂದರೆ ಉದ್ಭವವಾಗುತ್ತದೆ.

ಅಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)
Disposal of Cases in Land Tribunals in the State

322 SRI K.B. SHIVAIAH (Nanjangud).—Will the Minister for Revenue be pleased to state.

(*a*) the number of persons submitted applications, on behalf of tenants to the land tribunals in the State ;

(*b*) the number of applications disposed off so far ;

(*c*) the number of tenants and landlords;

(*d*) the time allotted to dispose off the remaining applications?